ಪೋಲೀಸ್ ಸ್ಟೇಷನ್‌ನನ್ನು ಕೊಡುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್:- ಮಾನ್ಯ ಉಪಾಧ್ಯಕ್ಷಿಣಿಯವರೇ, ಮೊನ್ನೆ ಕೂಡ ಮಾನ್ಯ ಮಂತ್ರಿಗಳು ಬಂದಾಗ ಪೋಲೀಸ್ ಸ್ಟೇಷನ್ ಬಗ್ಗೆ ಹೇಳಿದ್ದೇನೆ. ಅವರೂ ಪೋಲೀಸ್ ಕೊಡುವ ಬಗ್ಗೆ ಹೇಳಿದ್ದಾರೆ. ದಯವಿಟ್ಟು ಈ ವರ್ಷದಲ್ಲಿ ಮಂಜೂರಾತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್:- ಈಗಾಗಲೇ ಹೇಳಿದ್ದೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷ ಯೋಜನೆಗಳಿಗೆ ಹಣಕಾಸಿನ ನೆರವು.

(2335) ಶ್ರೀ ಪಿ.ಬಸವರಾಜ್ (ಬ್ರಹ್ಮಾವರ)ಶ್ರೀ ಜಿ.ಎಸ್.ಆಚಾರ್ (ಬೈಂದೂರು)-ಯೋಜನೆ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಇಲಾಖೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ-

ಅ) ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನ ಕೆಲವು ವಿಶಿಷ್ಟ ಯೋಜನೆಗಳಿಗೆ ಸಾಸ್ಥಿಕ ಹಣಕಾಸು ನೆರವು ಪಡೆಯಲು ಸರ್ಕಾರದ ಮಂಜೂರಾತಿ ಕೇಳಿರುವ ವಿಚಾರದಲ್ಲಿ ಅನುಮತಿ ನೀಡಲು ವಿಳಂಬವೇಕೆ ?

ಆ) ಈ ಕುರಿತು ಸರ್ಕಾರದ ಧೋರಣೆಯೇನು ?

ಶ್ರೀಮತಿ ಕೆ.ಎಸ್.ನಾಗರತ್ನಮ್ಮ (ಯೋಜನೆ , ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಮಂತ್ರಿಗಳು)-

ಅ) ಈ ರೀತಿಯ ಪ್ರಸ್ತಾವನೆಯು ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಇಲಾಖೆಯಲ್ಲಿ ಬಂದಿಲ್ಲ. ಮತ್ತು ಸರ್ಕಾರದ ಅನುಮತಿ ಅಗತ್ಯವಿಲ್ಲ.

ಆ) ಬ್ಯಾಂಕುಗಳಿಂದ ಯೋಜನೆಗಳಿಗೆ ಹಣಕಾಸು ನೆರವು ಬೇಕಾದರೆ ಸರ್ಕಾರದ ಮಂಜೂರಾತಿ ಬೇಕಾಗಿರುವುದಿಲ್ಲ.

ಶ್ರೀ.ಜಿ .ಎಸ್.ಆಚಾರ್:- ಮಾನ್ಯ ಅಧ್ಯಕ್ಷರೇ, ಇಲ್ಲಿ ಪ್ರಶ್ನೆಗೆ ಉತ್ತರವಾಗಿ ಜಿಲ್ಲಾಪರಿಷತ್ತಿನ ಯೋಜನೆಗಳಿಗೆ ಸರ್ಕಾರದ ಅನುಮತಿ ಅಗತ್ಯವಿಲ್ಲ, ಬ್ಯಾಂಕುಗಳಿಂದ ಹಣಕಾಸಿನ ನೆರವು ಬೇಕಾದರೆ ಮಂಜೂರಾತಿ ಬೇಕಾಗಿಲ್ಲವೆನ್ನುವ ಉತ್ತರ ಬಂದಿದೆ. ನನಗೆ ಗೊತ್ತಿರುವಹಾಗೆ, 1988 ರಲ್ಲಿ ದಕ್ಷಿಣ ಕನ್ನಡ ಜಿಲ್ಲಾಪರಿಷತ್ತು 10 ಕೋಟಿ ರೂಪಾಯಿಗಳ ಸಾಲವನ್ನು ಎತ್ತುವ ಯೋಜನೆಯನ್ನು ಮಾಡಿದ್ದು, ಬ್ಯಾಂಕ್‌ಗಳ ನೆರವಿನಿಂದ ರಸ್ತೆಗಳು, ಸೇತುವೆ ನಿರ್ಮಾಣ, ಚಿಕ್ಕ ನೀರಾವರಿ, ಮಿನಿ ವಿದ್ಯುತ್ ಸ್ಥಾವರ ಚಿಕ್ಕ ಉದ್ದಿಮೆಗಳು ಸ್ಥಾಪನೆ ಇದೆಲ್ಲ ಲಾಭದಾಯಕವಾದ ಇನ್‌ಕಮ್ ಜನರೇಟಿಂಗ್ ಸ್ಕೀಮ್ ಎಂದು ಮಾಡಿ ಇಂಥ ಯೋಜನೆಗಳನ್ನು ರೂಪಿಸುವಂಥದ್ದನ್ನು ಮಾಡಿದರು. ಆಗ ನಮ್ಮ ರೂರಲ್ ಡೆವಲಪ್‌ಮೆಂಟ್ ಮಂತ್ರಿಗಳಾಗಿದ್ದ ಮಾನ್ಯ ನಜೀರ್‌ಸಾಬ್‌ರವರು, ಮಾನ್ಯ ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆಯವರು ಅವರೆಲ್ಲರೂ ಬಂದು ನೋಡಿ ಎಲ್ಲರೂ ಅದಕ್ಕೆ ಒಪ್ಪಿ ಈ ಯೋಜನೆಗೆ ನಾವು ಪ್ರೋತ್ಸಾಹ ಕೊಡುತ್ತೇವೆಂದು ಹೇಳಿದ್ದರು. ಅನಂತರ ನಬಾರ್ಡ್‌ನವರೊಡನೆ ಮಾತುಕತೆ ನಡೆದು, ನಬಾರ್ಡಿನ ಅಧ್ಯಕ್ಷರು ವಿ.ಆರ್.ನಾಯಕ್‌ರವರು ಬಂದು ಹೇಳಿದರು. ಈ ಯೋಜನೆ ಕರ್ನಾಟಕದಲ್ಲಿಯೇ ಪ್ರಥಮವಾದುದು, ಸರ್ಕಾರ ಅದಕ್ಕೆ ಗ್ಯಾರಂಟಿ ಕೊಟ್ಟರೆ ನಾವು ಸಾಲವನ್ನು ಮಂಜೂರು ಮಾಡುತ್ತೇವೆಂದು ಹೇಳಿದ್ದರು. ಇದು ಒಂದು ಪ್ರಯೋಗ. ಯಾವ ರೀತಿ ಜಿಲ್ಲಾಪರಿಷತ್ತು ಎನ್ನುವಂಥದ್ದು ಒಂದು ಪ್ರಯೋಗವೋ ಅದೇ ರೀತಿಯಲ್ಲಿ ಈ ವಿಶಿಷ್ಟವಾದ ಯೋಜನೆಗಳಿಗೆ ಸರ್ಕಾರದವರು ನೆರವು ಕೊಡದಿದ್ದರೂ ಸಾಲ ಎತ್ತಿ ಮಾಡುವಂಥಾ ಧೈರ್ಯದಲ್ಲಿ ಒಂದು ಪ್ರಯೋಗವಾಗುತ್ತದೆ. ಇದಕ್ಕೆ ಸರ್ಕಾರ ಏತಕ್ಕೆ ಅನುಮತಿ ನೀಡಿಲ್ಲ. ಮತ್ತೆ ಗ್ಯಾರಂಟಿ ಕೊಡುವಂಥ ವಿಚಾರದಲ್ಲಿ ಸರ್ಕಾರದ ಮುಂದೆ ಬಂದಿದೆ. ಸಬ್‌ಸಿಕ್ಕೆಂಟ್ಲಿ 2-3 ಜನ ಅಧ್ಯಕ್ಷರು ಬಂದು ಮಾತನಾಡಿದ್ದಾರೆ. ನಾವು ಶಾಸಕರು ಸಂಬಂಧಪಟ್ಟವರ ಹತ್ತಿರ ಮಾತನಾಡಿದ್ದೇವೆ. ಅದಕ್ಕೆ ಸರ್ಕಾರ ಏನು ಮಾಡುತ್ತದೆ ಎಂದು ಕೇಳುತ್ತೇನೆ ?

ಶ್ರೀಮತಿ ಕೆ.ಎಸ್.ನಾಗರತ್ನಮ್ಮ:- ಮಾನ್ಯ ಸಭಾಧ್ಯಕ್ಷರೇ, ನಮ್ಮ ಡಿಪಾರ್ಟ್‌ಮೆಂಟ್‌ಗೆ ಈ ರೀತಿಯಾದ ಪ್ರಪೋಸಲ್ ಯಾವುದೂ ಬಂದಿಲ್ಲ. ಅವರಿಗೇನಾದರೂ ವಿಶೇಷವಾಗಿ ಮಾಹಿತಿ ಬೇಕಾದರೆ ಆರ್‌ಡಿಪಿಆರ್

ಮಿನಿಸ್ಟರ್‌ರವರನ್ನು ಕೇಳಬಹುದು.

ಚಿತ್ತಾಪುರ ತಾಲ್ಲೂಕು ಸಾಲವಾರದಲ್ಲಿ ಆರಕ್ಷಕ ಠಾಣೆಯನ್ನು ಸ್ಥಾಪಿಸುವ ಬಗ್ಗೆ.

(2360) ಶ್ರೀ ಬಾಬುರಾವ್ ಚವ್ಹಾಣ್ (ಶಹಬಾದ್)ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) ಚಿತ್ತಾಪುರ ತಾಲ್ಲೂಕು ಸಾಲವಾರದಲ್ಲಿ ಪೋಲೀಸ್ ಠಾಣೆಯನ್ನು ಸ್ಥಾಪಿಸಲಾಗುವುದೇ ;

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಸ್ಥಾಪನೆ ಮಾಡಲಾಗುವುದು ;

ಇ) ಈ ಬಗ್ಗೆ ಸರ್ಕಾರದ ನಿಲುವು ಏನು ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು)-

ಅ) ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ.

ಆ) ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ.

ಇ) ಮಾನ್ಯ ಸದಸ್ಯರು ಈ ವಿಚಾರವನ್ನು ಈಗ ಸರ್ಕಾರದ ಗಮನಕ್ಕೆ ತಂದಿರುತ್ತಾರೆ. ಆದ್ಯತೆ, ಅಗತ್ಯತೆ ಮತ್ತು ಲಭ್ಯವಿರುವ ಸಂಪನ್ಮೂಲಗಳನ್ನಾಧರಿಸಿ ಈ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು.

ಶ್ರೀ ಬಾಬುರಾವ್ ಚವ್ಹಾಣ್:- ಮಾನ್ಯ ಅಧ್ಯಕ್ಷರೇ, ಚಿತ್ತಾಪುರ ತಾಲ್ಲೂಕ್, ನಾಲ್ವಾರ್‌ನಲ್ಲಿ ಪೋಲೀಸ್ ಸ್ಟೇಷನ್‌ನ್ನು ಸ್ಥಾಪನೆ ಮಾಡಬೇಕೆಂದು ನಾನು ಕೇಳಿಕೊಂಡಿದ್ದೇನೆ. ಮಾನ್ಯ ಮಂತ್ರಿಗಳು ಆದ್ಯತೆಯ ಮೇರೆಗೆ ಕೊಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಯವರು, ಮಾನ್ಯ ಬಸವರಾಜಪಾಟೀಲ್ ಅಟ್ಟೂರೆಯವರಿಗೆ ಯಾವರೀತಿ ಟ್ರಾಫಿಕ್ ಪೋಲೀಸ್ ಸ್ಟೇಷನ್ ಕೊಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟರೋ ಅದೇ ರೀತಿಯಲ್ಲಿ ನನಗೂ ಕೂಡ ಒಂದು ಪೋಲೀಸ್ ಸ್ಟೇಷನ್ ಮಂಜೂರು ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಧರ್ಮಸಿಂಗ್ :- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಬಸವರಾಜಪಾಟೀಲ್ ಅಟ್ಟೂರೆ ಅವರಿಗೆ ಟ್ರಾಫಿಕ್ ಪೋಲೀಸ್ ಸ್ಟೇಷನ್ ಕೊಡುತ್ತಿರುವುದು ಅವರ ಉಪಕಾರಕ್ಕೇನು ಕೊಡುತ್ತಿಲ್ಲ. ಏತಕ್ಕೆಂದರೆ ಅಲ್ಲಿ ಬಸವಕಲ್ಯಾಣದಲ್ಲಿ ಅವರು ಹೇಳಿದಹಾಗೆ ನಾಲ್ಕುಸಾವಿರ, ಐದುಸಾವಿರ ಲಾರಿಗಳ ಮೂವ್‌ಮೆಂಟ್ ಡೈಲಿ ಇದೆ. ಆದ್ದರಿಂದ ಅಲ್ಲಿಗೆ ಒಂದು ಕೊಡಬೇಕಾಗಿದೆ. ಅಲ್ಲದೆ ಅದು ಒಂದು ಸೆಂಟರ್ ಪ್ಲೇಸ್ ಇದೆ ಕೊಟ್ಟಿದ್ದೇವೆ. ಈಗ ಅವರು ಚಿತ್ತಾಪುರ ತಾಲ್ಲೂಕಿನ ನಾಲವಾರದಲ್ಲಿ ಒಂದು ಪೋಲೀಸ್ ಸ್ಟೇಷನ್ ಬೇಕೆಂದು ಕೇಳಿದ್ದಾರೆ. ಈಗಾಗಲೇ ನಾನು ಹೇಳಿದಹಾಗೆ ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ಜನಸಂಖ್ಯೆಗೆ ಅನುಗುಣವಾಗಿ ಇವತ್ತು 1300 ಪೋಲೀಸ್ ಸ್ಟೇಷನ್‌ಗಳು ಬೇಕಾಗಿದೆ. ಅಂದರೆ ಪ್ರತಿ 50 ಸಾವಿರ ಜನಸಂಖ್ಯೆಗೆ ಒಂದು ಪೋಲೀಸ್ ಸ್ಟೇಷನ್ ಬೇಕಾಗಿರತಕ್ಕಂಥದ್ದನ್ನು ಮಾನ್ಯ ಧರ್ಮವೀರ ಸಮಿತಿಯವರು ಕೂಡ ನಿರ್ಧಾರ ಮಾಡಿದ್ದಾರೆ. ಈದ ಸಧ್ಯಕ್ಕೆ 496 ಪೋಲೀಸ್ ಸ್ಟೇಷನ್‌ಗಳನ್ನು ಮತ್ತು ಹೋದವರ್ಷದಲ್ಲಿ 15 ಪೋಲೀಸ್ ಸ್ಟೇಷನ್‌ಗಳು, ಹತ್ತು ಔಟ್‌ಪೋಸ್ಟ್ ಪೋಲೀಸ್ ಸ್ಟೇಷನ್‌ಗಳನ್ನು ಕೂಡ ನಾವು ಕೊಟ್ಟಿದ್ದೇವೆ. ಮಾನ್ಯ ಧರ್ಮವೀರ, ನ್ಯಾಷನಲ್ ಪೋಲೀಸ್ ಕಮೀಷನರೆಂದು ಪ್ರತಿಯೊಂದು ವರ್ಷಕ್ಕೆ 15 ಪೋಲೀಸ್ ಸ್ಟೇಷನ್ಸ್‌ನಂತೆ 5 ವರ್ಷಗಳ ಅವಧಿಯಲ್ಲಿ 55 ಪೋಲೀಸ್ ಸ್ಟೇಷನ್‌ಗಳನ್ನು ಮಾಡಬೇಕೆಂದು ಹೇಳಿದ್ದಾರೆ. ಅದು ಕೂಡ ಸಾಲದು. ಮಾನ್ಯ ವಿರೋಧಪಕ್ಷದ ನಾಯಕರಿಗೂ ಗೊತ್ತು. ಬಾರ್ಡರ್ ಜಿಲ್ಲೆಗಳಲ್ಲಿ ಸಾಕಷ್ಟು ದರೋಡೆಗಳು, ಬೇರೆ ಬೇರೆ ಪ್ರಕರಣಗಳು ಇನ್‌ಕ್ರೀಸ್ ಆಗುತ್ತಿಗೆ. ಆದ್ದರಿಂದ ಕರ್ನಾಟಕ ರಾಜ್ಯದಲ್ಲಿ 1992-93ನೇ ಸಾಲಿನಲ್ಲಿ 43 ಪೋಲೀಸ್ ಸ್ಟೇಷನ್‌ಗಳನ್ನು ಮಾಡಬೇಕೆಂದು ಸರ್ಕಾರದಲ್ಲಿದೆ. ಇವತ್ತು ಪ್ರಶ್ನೆ ಕೇಳಿದ ಹಾಗೆ ಎಲ್ಲ ಕಡೆ ಮಾಡಿಕೊಡತಕ್ಕಂಥದ್ದಲ್ಲ. ಜನಸಂಖ್ಯೆಗೆ ಅನುಗುಣವಾಗಿ ಪ್ರತಿ ಜಿಲ್ಲೆಗೂ ಕೊಡಬೇಕಾಗಿದೆ. ಗುಲ್ಬರ್ಗ ಜಿಲ್ಲೆಯಲ್ಲಿ ಚಿತ್ತಾಪುರ ತಾಲ್ಲೂಕು ಕೂಡ ಬಹಳ ದೊಡ್ಡ ತಾಲ್ಲೂಕಾಗಿದೆ. ನಮಗೆ ರಿಸೋರ್ಸಸ್ ಪರ್ಮಿಟ್